GULBARGA UNIVERSITY
"Jnana Ganga", GULBARGA - 585 106, Karnataka, India.

☎ 08472-263202
Fax 08472-263206
E-Mail: root@guluni.kar.nic.in
Grams: UNIGUL

ಸಂ.ಗುವಿಗು/ವಿಮವಿ/ಸಂಲಗ್ನತೆ/2014-15/54

ದಿನಾಂಕ:04-04-2014

## ಅಧಿಸೂಚನೆ

ವಿಷಯ: 2014-15 ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ಹಾಗೂ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಿಗೆ ಮುಂದುವರಿಕೆ ಸಂಯೋಜನೆ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ: 1.ಕುಲಪತಿಗಳ ಆದೇಶ ದಿನಾಂಕ 4.4.2014

ಗುಲಬರ್ಗಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಿಕ್ಷಣ ಹಾಗೂ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಸುವುದೇನೆಂದರೆ **2014-2015** ನೇ ಶೈಕ್ಷಣಿಕ ವರ್ಷಕ್ಕಾಗಿ ಶಿಕ್ಷಣ ಹಾಗೂ ದೈಹಿಕ ಶಿಕ್ಷಣ (ಬಿ.ಎಡ್, ಎಂಎಡ್ ಹಾಗೂ ಬಿ.ಪಿ.ಎಡ್) ಮಹಾವಿದ್ಯಾಲಯಗಳಿಗೆ ಮುಂದುವರಿಕೆ/ಶಾಶ್ವತ ಸಂಲಗ್ನತೆ/ ನವೀಕರಣ ಮಂಜೂರಾತಿಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59 (3) ರ ಮೇರೆಗೆ ಅರ್ಜಿಗಳನ್ನು ಕರೆಯಲಾಗಿದೆ.

**ಕೋರ್ಸುಗಳು : ಬಿ.ಎಡ್, ಎಂ.ಎಡ್ ಹಾಗೂ ಬಿ.ಪಿಎಡ್ ಮುಂದುವರಿಕೆ**

ಅರ್ಜಿಗಳನ್ನು ಈ ಕೆಳಗೆ ನಮೂದಿಸಿದ ವಿವರಗಳಂತೆ ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗದ ಕೌಂಟರ್‌ನಿಂದ ಎಸ್.ಬಿ.ಎಚ್. ಚಲನ್ ಅಥವಾ ಡಿ.ಡಿ. ಮೂಲಕ ಶುಲ್ಕ ಪಾವತಿಸಿ ಪಡೆಯಬಹುದಾಗಿದೆ. ವಿಶ್ವವಿದ್ಯಾಲಯದ ವೆಬ್‌ಸೈಟದಿಂದ ಅರ್ಜಿ ನಮೂನೆ ಡೌನಲೋಡ ಮಾಡಿಕೊಂಡು ಅರ್ಜಿ ಶುಲ್ಕವನ್ನು ಬ್ಯಾಂಕ ಡಿ.ಡಿ. ಮೂಲಕ ಸಂದಾಯಿಸಿ ಅರ್ಜಿ ಸಲ್ಲಿಸಬಹುದು.

| ಕ್ರ.ಸಂ. | ವಿವರ | ಮುದ್ರಿತ ಅರ್ಜಿಯ ಬಣ್ಣ | ಅರ್ಜಿಯ ಶುಲ್ಕ |
|---|---|---|---|
| 01 | ಶಾಶ್ವತ ಸಂಲಗ್ನತೆ | ನೀಲಿ (Blue) | ರೂ. 2500.00 |
| 03 | ಶಾಶ್ವತ ಸಂಲಗ್ನತೆಯ ನವೀಕರಣ | ಹಸಿರು (Green) | ರೂ. 2500.00 |
| 04 | ಮುಂದುವರಿಕೆ | ಬಿಳಿ (White) | ರೂ. 2200.00 |

ಅರ್ಜಿಗಳನ್ನು ಕೊಡುವ ದಿನಾಂಕ 4.4.2014 ರಿಂದ 12.5.2014 ವರೆಗೆ (ರಜಾ ದಿನಗಳನ್ನು ಹೊರತುಪಡಿಸಿ)

ಭರ್ತಿ ಮಾಡಿದ ಅರ್ಜಿಗಳನ್ನು 05 ಪ್ರತಿಗಳಲ್ಲಿ ವಿಶ್ವವಿದ್ಯಾಲಯಕ್ಕೆ ಈ ಕೆಳಗೆ ನಮೂದಿಸಿದ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಕುಲಸಚಿವರು ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ಇವರ ಕಚೇರಿಯಲ್ಲಿ ಮಾತ್ರ ಖುದ್ದಾಗಿ ಸಲ್ಲಿಸಿ ಸ್ವೀಕೃತ ಪತ್ರವನ್ನು ಪಡೆಯಲು ತಿಳಿಸಲಾಗಿದೆ. ಕುಲಸಚಿವರ ಕಚೇರಿಯಲ್ಲಿ ಸಲ್ಲಿಸದ ಅರ್ಜಿಗಳನ್ನು ಯಾವ ಕಾರಣಕ್ಕೂ ಪರಿಗಣಿಸದೇ ತಿರಸ್ಕರಿಸಲಾಗುವುದು.

1. ದಂಡ ರಹಿತ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **26.4.2014**
2. ರೂ. 32,700/- ದಂಡದೊಂದಿಗೆ ಅರ್ಜಿ ಸಲಿಸುವ ಕೊನೆಯ ದಿನಾಂಕ: **5.5.2014**
3. ರೂ. 52,400/- ದಂಡದೊಂದಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **12.5.2014** ದಿನಾಂಕದ ನಂತರ ಸಲ್ಲಿಸಿದ ಅರ್ಜಿಗಳನ್ನು ಯಾವ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ. ಡಿ.ಡಿ.ಗಳು ನಿಗದಿತ ಹಾಗೂ ಹಿಂದಿನ ದಿನಾಂಕದವುಗಳಿದ್ದರೂ ಅರ್ಜಿಯನ್ನು ತಡವಾಗಿ ಸಲ್ಲಿಸಿದಲ್ಲಿ ದಂಡ ಶುಲ್ಕ ವಿಧಿಸಲಾಗುವುದು.

ಸಿಂಡಿಕೇಟ ಸಭೆಯ ಸಂಖ್ಯೆ 09 ದಿನಾಂಕ 27.10.1986ರ ನಿರ್ಣಯದ ಮೇರೆಗೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಸಂಸ್ಥೆಗಳು ಹಾಗೂ ಕಾಲೇಜುಗಳು ಮೇಲೆ ನಮೂದಿಸಿದ ಸಂಲಗ್ನತೆ ಶುಲ್ಕದ ಶೇಕಡ 50 ರಷ್ಟು ಶುಲ್ಕ ಮಾತ್ರ ಪಾವತಿ ಮಾಡಬೇಕು.

D:13-14A

## ಶುಲ್ಕ ವಿವರ

| ಕ್ರ.ಸಂ. | ಕೋರ್ಸು | ಶಾಶ್ವತ ಸಂಲಗ್ನತೆ ಶುಲ್ಕ ರೂ. | ಮುಂದುವರಿಕೆ ಶುಲ್ಕ ರೂ. | 3 ವರ್ಷಕ್ಕೊಮ್ಮೆ ತನಿಖೆ ಮಾಡಲು (ಶಾಶ್ವತ ಸಂಯೋಜನೆ ಪಡೆದ ಮಹಾವಿದ್ಯಾಲಯಗಳಿಗೆ |
|---|---|---|---|---|
| 01 | ಬಿ.ಪಿ.ಎಡ್ | 91,520.00 | 91,520.00 | -- |
| 02 | ಬಿ.ಎಡ್ | 91,520.00 | 91,520.00 ಸಮನ್ವಯ ಸಮಿತಿ ಶುಲ್ಕವನ್ನೊಳಗೊಂಡಿದೆ | 91,520.00 |
| 03 | ಎಂ.ಎಡ್ | -- | 1,14,950.00 | -- |

### ಇತರೆ ಶುಲ್ಕ

| | | |
|---|---|---|
| 1. | ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ಮಹಾವಿದ್ಯಾಲಯದ ವರ್ಗಾವಣೆ ಶುಲ್ಕ | 1. ವರ್ಗಾವಣೆ ಮಾಡುವ ಸಂಸ್ಥೆಗೆ ರೂ. 54,000/-<br>2. ಪಡೆದುಕೊಳ್ಳುವ ಸಂಸ್ಥೆಗೆ ರೂ. 54,000/- |
| 2. | ಮಹಾವಿದ್ಯಾಲಯದ ಬಿ.ಎಡ್/ಎಂ.ಎಡ್/ಬಿ.ಪಿ.ಎಡ್ ಸ್ಥಳಾಂತರಿಸುವ ಶುಲ್ಕ. | 2. ರೂ. 38,000/- |

**ವಿಶೇಷ ಸೂಚನೆ:**

1. ಯಾವುದೇ ಸಂಘ/ಸಂಸ್ಥೆಗಳು ಹೊಸ ಮಹಾವಿದ್ಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಕಾಲೇಜಿನ ಹೆಸರಿನಲ್ಲಿ **National/Indian** ಪದಬಳಕೆ ಮಾಡಕೂಡದು.
2. ಪತ್ರ ವ್ಯವಹಾರಕ್ಕೆ ಸಂಪೂರ್ಣ ಖಾಯಂ ವಿಳಾಸ ನೀಡತಕ್ಕದ್ದು. ನೀವು ನೀಡಿದ ವಿಳಾಸದ ಮೇಲೆ ಪತ್ರ ವ್ಯವಹಾರ ಮಾಡಿದಾಗ ತಲುಪದೆ ಇದ್ದಲ್ಲಿ ವಿಶ್ವವಿದ್ಯಾಲಯವು ಇದಕ್ಕೆ ಜವಾಬ್ದಾರವಲ್ಲವೆಂದು ತಿಳಿಸಲಾಗಿದೆ.
3. ಅರ್ಜಿಯನ್ನು ಸಲ್ಲಿಸುವಾಗ ಗಮನಿಸಬೇಕಾದ ಅಂಶಗಳನ್ನು ಪಾಲಿಸಬೇಕಾದ ಷರತ್ತುಗಳನ್ನು ಹಾಗೂ ಲಗತ್ತಿಸಬೇಕಾದ ದಾಖಲಾತಿಗಳು ಹಾಗೂ ಶುಲ್ಕದ ಬಗೆಗಿನ (**ಡಿ.ಡಿ.ಹಿಂಬಾಗದಲ್ಲಿ ಕಾಲೇಜಿನ ಮೊಹರು ಮುದ್ರಿಸಿ ಯಾವ ಕಾರಣಕ್ಕಾಗಿ ಡಿ.ಡಿ. ಪಡೆಯಲಾಗಿದೆ ಎಂಬುದನ್ನು ನಮೂದಿಸಬೇಕು.**) ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ವಿವರಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ.
4. ವಿಶ್ವವಿದ್ಯಾಲಯದ ಅಧಿಸೂಚನೆಯಂತೆ ಅಪೂರ್ಣವಾದ ಅರ್ಜಿಗಳನ್ನು (ವಿವರ, ಶುಲ್ಕ, ದಾಖಲಾತಿಗಳು ಇತ್ಯಾದಿ) ತಿರಸ್ಕರಿಸಲಾಗುವುದು.
5. ಅರ್ಜಿಯ ಮೂಲ ಪ್ರತಿಗಳನ್ನು ಮಾತ್ರ ಸಲ್ಲಿಸಲು ಸೂಚಿಸಲಾಗಿದೆ.
6. The affiliated colleges applying for continuation of affiliation must have uploaded AISHE DCF-II continuation affiliation forms will not be issued to and accepted from such of those colleges who have not uploaded AISHE DCF II

ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ಶೈಕ್ಷಣಿಕ ವಿಭಾಗದಿಂದ ಪಡೆಯಬಹುದು. ಇಲ್ಲವೇ ವಿಶ್ವವಿದ್ಯಾಲಯದ ವೆಬ್‌ಸೈಟ್ http/www.gulbargauniversity.kar.nic.in ನಿಂದ ಪಡೆಯಬಹುದು.

24/04/14

ಕುಲಸಚಿವರು

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಗೆ

ಪ್ರಾಂಶುಪಾಲರು, ವಿಶ್ವವಿದ್ಯಾಲಯದ ಅಧೀನಕ್ಕೊಳಪಟ್ಟ ಶಿಕ್ಷಣ ಹಾಗೂ ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳು

ಪ್ರತಿ

1. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಜಂಟಿ ನಿರ್ದೇಶಕರು, ಶಿಕ್ಷಣ ಇಲಾಖೆ, ಗುಲಬರ್ಗಾ
3. ವಿತ್ತಾಧಿಕಾರಿಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
4. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು/ಕುಲಸಚಿವರ ಆಪ್ತ ಸಹಾಯಕರು ಗು.ವಿ.ಗುಲಬರ್ಗಾ
5. ಉಪ ಕುಲಸಚಿವರು/ಸಹಾಯಕ ಕುಲಸಚಿವರು/ವಿಷಯ ನಿರ್ವಾಹಕರು ವಿದ್ಯಾಮಂಡಲ ಗು.ವಿ.ಗುಲಬರ್ಗಾ

# ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಅನುಬಂಧ-01

## ಸಂಯೋಜನೆಯ ಅರ್ಜಿ ಸಲ್ಲಿಸುವಾಗ ಗಮನಿಸಬೇಕಾದ ಅಂಶಗಳು ಹಾಗೂ ಪಾಲಿಸಬೇಕಾದ ಷರತ್ತುಗಳು.

- ಹೊಸ ಶಾಶ್ವತ ಸಂಯೋಜನೆ ಪಡೆಯಲು ಇಚ್ಛಿಸುವ ಮಹಾವಿದ್ಯಾಲಯಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ 62 ರ ಮೇರೆಗೆ ಸತತವಾಗಿ ಐದು ವರ್ಷಗಳ ಸಂಯೋಜನೆ ಹೊಂದಿದ್ದು ವಿಶ್ವವಿದ್ಯಾಲಯ ವಿಧಿಸಿದ ಎಲ್ಲಾ ಷರತ್ತುಗಳನ್ನು ಪೂರೈಸಿರಬೇಕು ಹಾಗೂ ನ್ಯಾಕ್ ನಿಂದ ಕನಿಷ್ಠ C++ ಮಾನ್ಯತೆ ಪಡೆದಿರುವ ಕಾಲೇಜುಗಳು ಮಾತ್ರ ಶಾಶ್ವತ ಸಂಯೋಜನೆ ಕೋರಿ ಅರ್ಜಿ ಸಲ್ಲಿಸಬಹುದಾಗಿದೆ.
- ಈಗಾಗಲೇ ಶಾಶ್ವತ ಸಂಯೋಜನೆ ಪಡೆದ ಮಹಾವಿದ್ಯಾಲಯಗಳು ಸಹ ಮೂರು ವರ್ಷಕ್ಕೊಮ್ಮೆ ಮಾಡುವ ತನಿಖೆಗೆ ನಿಗದಿತ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು. ಶಾಶ್ವತ ಸಂಲಗ್ನತೆ ಪಡೆದ ಮಹಾವಿದ್ಯಾಲಯಗಳು ಯಾವುದೇ ತರಹದ ಹೊಸ ಕೋರ್ಸು/ವಿಷಯಗಳನ್ನು ಪ್ರಾರಂಭಿಸಲು ಈಗಾಗಲೇ ಸಂಲಗ್ನತೆಗೆ ಅನುಮತಿ ಪಡೆದಲ್ಲಿ ಅಂತಹ ಕೋರ್ಸು/ವಿಷಯಗಳಿಗೆ ಶಾಶ್ವತ ಸಂಲಗ್ನತೆ ಪಡೆಯುವವರೆಗೆ ಮುಂದುವರಿಕೆ ಸಂಲಗ್ನತೆಗೆ ಅರ್ಜಿ ನಿಗದಿತ ಶುಲ್ಕದೊಂದಿಗೆ ಸಲ್ಲಿಸಬೇಕು.
- 2011-2012 ನೇ ಶೈಕ್ಷಣಿಕ ಸಾಲಿನಲ್ಲಿ ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸಿ ಸರ್ಕಾರ/ವಿಶ್ವವಿದ್ಯಾಲಯದ ಆದೇಶವನ್ನು ನಿರೀಕ್ಷಿಸುತ್ತಿರುವ ಕಾಲೇಜುಗಳು ಸಹ ಮುಂದುವರಿಕೆ ಸಂಯೋಜನೆಗೆ ನಿಗಧಿತ ನಮೂನೆಯಲ್ಲಿ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
- ಎಂ.ಬಿ.ಎ. ಮತ್ತು ಎಂ.ಸಿ.ಎ. ಕೋರ್ಸುಗಳಿಗೆ ಅರ್ಜಿ ಸಲ್ಲಿಸುವಾಗ ಎ.ಐ.ಸಿ.ಟಿ.ಈ ಯಿಂದ ಹಾಗೂ ಎಮ್.ಈಡಿ ಕೋರ್ಸುಗಳಿಗೆ ಎನ್.ಸಿ.ಟಿ.ಇ ಯಿಂದ ಪಡೆದ ಅಧಿಕೃತ ಅನುಮತಿಯ ಪ್ರತಿಯನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.
- ಸಿಂಡಿಕೇಟ ಸಭೆಯ ಗೊತ್ತುವಳಿ ಸಂ. 10,11,22 ಮತ್ತು 27 ದಿನಾಂಕ 5ನೇ ಡಿಸೆಂಬರ್ 1989 ರ ನಿರ್ಣಯದಂತೆ ಹೊಸ:ಮುಂದುವರಿಕೆ ಸಂಲಗ್ನತೆಯ ಅರ್ಜಿಯ ಜೊತೆಗೆ ಆಡಳಿತ ವರ್ಗ/ಪ್ರಿನ್ಸಿಪಾಲರು ವಿಶ್ವವಿದ್ಯಾಲಯ: ಸರಕಾರದಿಂದ ನಿಗದಿಪಡಿಸಿದ ಪ್ರವೇಶ ಸಂಖ್ಯೆಗಿಂತ ಹೆಚ್ಚಿನ ಪ್ರವೇಶವನ್ನು ನೀಡುವುದಿಲ್ಲವೆಂದು ಐವತ್ತು ರೂಪಾಯಿ ಬೆಲೆಯ ಸ್ಟ್ಯಾಂಪ್ ಪೇಪರಿನ ಮೇಲೆ ಮುಚ್ಚಳಿಕೆ ಪತ್ರ ಬರೆದು ಕೊಡಬೇಕು. ಒಂದು ವೇಳೆ ಸಂಲಗ್ನತೆಯ ಅರ್ಜಿಯ ಜೊತೆಗೆ ಅಫಿಡವಿಟ್ ಲಗತ್ತಿಸದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ಸ್ವೀಕರಿಸಲಾಗುವದಿಲ್ಲ. ಹಾಗೂ ಈ ವಿಷಯದಲ್ಲಿ ಯಾವುದೇ ಪತ್ರ ವ್ಯವಹಾರ ಕೂಡ ಮಾಡುವುದಿಲ್ಲವೆಂದು ನಿಖರವಾಗಿ ತಿಳಿಸಲಾಗಿದೆ.
- ಸಂಯೋಜನೆಯ ಅರ್ಜಿಯಲ್ಲಿ ಕೋರಲಾದ ಭಾಷೆ/ಐಚ್ಛಿಕ ವಿಷಯ ಸಮೂಹ/ ಪ್ರವೇಶ ಸಂಖ್ಯೆ ಹೆಚ್ಚಳ ಹೊರತು ಪಡಿಸಿ ಯಾವುದೇ ಬೇರೆ ವಿಷಯಗಳನ್ನು ಪರಿಗಣಿಸಲಾಗುವುದಿಲ್ಲ. ಸಮಿತಿ ಭೇಟಿ ನೀಡಿದ ಸಂದರ್ಭದಲ್ಲಿ ಅಥವಾ ಅನಂತರ ಕೋರಿಕೆ ಸಲ್ಲಿಸಿದಲ್ಲಿ ಅಂತಹ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.
- ಕಾನೂನು ಕಾಲೇಜುಗಳ ಹೊಸ/ಶಾಶ್ವತ ಸಂಯೋಜನೆಗೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಯನ್ನು ಸಂಪರ್ಕಿಸಬಹುದು.

## ಸ್ನಾತಕೋತ್ತರ ಕೋರ್ಸುಗಳಿಗೆ ಹೊಸ ಸಂಯೋಜನೆ.

- ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸಲು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಶಾಶ್ವತ ಸಂಯೋಜನೆ ಪಡೆದ ಅಥವಾ ಐದು ವರ್ಷಗಳ ಮುಂದುವರಿಕೆ ಸಂಯೋಜನೆ ಪಡೆದ ಮಹಾವಿದ್ಯಾಲಯಗಳು ಹಾಗೂ ನ್ಯಾಕ್ ಮಾನ್ಯತೆ ಪಡೆದ ಮಹಾವಿದ್ಯಾಲಯಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ. ಅಲ್ಲದೆ ಸದರಿ ಮಹಾವಿದ್ಯಾಲಯಗಳು ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಸಂಬಂಧಪಟ್ಟ ವಿಷಯಗಳ ಪದವಿ ಕೋರ್ಸುಗಳನ್ನು ನಡೆಸುತ್ತಿರಬೇಕು ಹಾಗೂ ಸದರಿ ಕಾಲೇಜಿನಲ್ಲಿಯೇ ಸ್ನಾತಕೋತ್ತರ ಕೋರ್ಸುಗಳನ್ನು ನಡೆಸಬೇಕು. (MBA, MSW,MFA,MCA,M.Ed ಕೋರ್ಸುಗಳಿಗೆ ಇದು ಅನ್ವಯಿಸುವುದಿಲ್ಲ.

Malagoud
22/11/13

D-13-14A

# ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಅನುಬಂಧ-02

## ಅರ್ಜಿಯ ಜೊತೆಯಲ್ಲಿ ಈ ಕೆಳಗೆ ನಮೂದಿಸಿದ ಮಾಹಿತಿಗಳ ಬಗ್ಗೆ ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸಬೇಕು.

1. ವಿಶ್ವವಿದ್ಯಾಲಯದಿಂದ ಹಾಕಲಾದ ಷರತ್ತುಗಳು ಹಾಗೂ ಅವುಗಳನ್ನು ಪೂರೈಸಿದ ಬಗ್ಗೆ ಕ್ರಮವಾಗಿ ಷರತ್ತುಗಳನ್ನು ನಮೂದಿಸಿ ಅವುಗಳ ಎದುರು ಪೂರೈಕೆ ಮಾಡಿದ ಬಗ್ಗೆ ವಿವರಗಳನ್ನು ನಮೂದಿಸಬೇಕು. (2013-14 ನೇ ಸಾಲಿನ ಸಂಲಗ್ನತೆ ಮಂಜೂರಿಸಿದ ಅಧಿಸೂಚನೆಯ ಪ್ರತಿ ಲಗತ್ತಿಸತಕ್ಕದ್ದು.)

2. ವಿಶ್ವವಿದ್ಯಾಲಯ ನಿಗದಿ ಪಡಿಸಿದ ಪ್ರವೇಶ ಸಂಖ್ಯೆ ಹಾಗೂ ಪ್ರವೇಶ ಪಡೆದವರ ಸಂಖ್ಯೆ ಹಾಗೂ ಕೋರ್ಸುವಾರು ಪಟ್ಟಿ ಸಲ್ಲಿಸತಕ್ಕದ್ದು.

3. ಅಧೀನ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸುಗಳ ಮುಂದುವರಿಕೆ ಸಂಲಗ್ನತೆ ಮಂಜೂರಾತಿಗಾಗಿ ನಿಗಧಿತ ಶುಲ್ಕದೊಡನೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು. ಅಧೀನ ಕಾಲೇಜುಗಳು ಹೊಸ ವಿಷಯ/ಹೊಸ ಕೋರ್ಸು ಪ್ರಾರಂಭಿಸಲು ಇಚ್ಛಿಸಿದಲ್ಲಿ ನಿಗಧಿತ ಶುಲ್ಕದೊಂದಿಗೆ ಪ್ರತಿಯೊಂದು ಕೋರ್ಸಿಗೆ ಶುಲ್ಕದೊಂದಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅಧೀನ ಕಾಲೇಜುಗಳಲ್ಲಿ ಒಂದಕ್ಕಿಂತ ಹೆಚ್ಚಿನ ಕೋರ್ಸುಗಳಿದ್ದಲ್ಲಿ ನಿಗಧಿತ ಶುಲ್ಕದೊಂದಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಕತಕ್ಕದ್ದು. ಸ್ನಾತಕೋತ್ತರ ಕೋರ್ಸುಗಳಿಗೆ ಅರ್ಜಿ ಸಲ್ಲಿಸುವ ಸಂಘ/ಸಂಸ್ಥೆ/ಟ್ರಸ್ಟ್ ಗಳ ಸದರಿ ಮಹಾವಿದ್ಯಾಲಯಗಳು ಕಡ್ಡಾಯವಾಗಿ ಸಂಬಂಧಪಟ್ಟ ಕೋರ್ಸುಗಳ ಸ್ನಾತಕ ಕೋರ್ಸುಗಳು ನಡೆಸುತ್ತಿರಬೇಕು ಹಾಗೂ ಕನಿಷ್ಠ 05 ವರ್ಷ ಸ್ನಾತಕ ಕೋರ್ಸುಗಳನ್ನು ನಡೆಸಿದ್ದರ ಬಗ್ಗೆ ಅನುಭವ ಹೊಂದಿರಬೇಕು.

4. ಆಡಳಿತ ಮಂಡಳಿಯಿಂದ ನೇಮಕಾತಿ ಹೊಂದಿದ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳ ಪಟ್ಟಿ.

5. ಮಹಾವಿದ್ಯಾಲಯದ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳ ಪ್ರಾವಿಡೆಂಟ್ ಫಂಡ್ ಅಕೌಂಟ್ ತೆರೆದ ಪ್ರತಿ

6. ಸಂಘ/ಸಂಸ್ಥೆ ಹಾಗೂ ಟ್ರಸ್ಟ ನೊಂದಣಿ ಹೊಂದಿದ ಪ್ರತಿ ಹಾಗೂ ಪ್ರಸ್ತುತ ವರ್ಷದ ನವೀಕರಣದ ಪ್ರತಿ

7. ಪ್ರಸ್ತುತ ವರ್ಷದ ಅಡಿಟ್ ಮಾಡಿಸಿದ ವರದಿಯ ಪ್ರತಿ

8. ಕಳೆದ ಸಾಲಿನ ವಿಶ್ವವಿದ್ಯಾಲಯದಿಂದ ಸಂಲಗ್ನತೆ ಪಡೆದ **ಅಧಿಸೂಚನೆಯ ಪ್ರತಿ**